# St. Claret College

| Roll No: |
|---|
| Date: |

## Autonomous, Bengaluru

UG END SEMESTER EXAMINATION-DECEMBER 2024

BCOM/ BCOM TTM/ BBA, I SEMESTER

KAC 124, VANIJYA – NIRVAHANA KANNADA

TIME: 3 hours. MAX. MARKS:80

2

This paper contains 03 printed pages and A to I parts

**Instructions:**

1. Verify and ensure that the question paper is completely printed.
2. Any discrepancies or questions about the exam paper must be reported to the COE within 1 hour after the examination.
3. Students must check the course title and course code before answering the questions.

ST. CLARET COLLEGE LIBRARY Bengaluru-13 AUTONOMOUS

### PART-A

**ಇವುಗಳಲ್ಲಿ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ.** **1x6=6**

1. ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು ಕಣ್ಣು, ನಲಿಸಿ ಕಲಿಸಿ ಮನವನೊಲಿಸಿ
ಕುಣಿಸುತ್ತಿರುವಳು,
ಒಮ್ಮೆ ಇವಳು ಒಮ್ಮೆ ಅವಳು
ಕುಣಿಸುತಿರುವಳು

2. ದಿನದಿನವು ದರವೇರಿ ಇಲ್ಲಿ ಎಲ್ಲಾ ದುಬಾರಿ;
ಮಾನ, ಅಂತಃಸಾಕ್ಷಿ ತಲೆಯ ಹೊರತು;
ಶಾಲೆ ದೇಗುಲಕಿಂತ ಮದ್ಯಾಲಯಗಳತ್ಯಧಿಕ
ನಾಗರೀಕನೆನಿಸಿಕೊಳಲಿದುವೆ ಗುರುತು.

### PART-B

**ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ.** **2x2=4**

3. ಬಿ.ಎಂ.ಶ್ರೀಕಂಠಯ್ಯ.
4. ಕೆ.ವಿ.ನಾರಾಯಣ.
5. ಓ.ಎಲ್.ನಾಗಭೂಷಣಸ್ವಾಮಿ.
6. ಧ್ಯಾನ.

### PART-C

**ಈ ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:** **4x5=20**

7. ಶಿಕ್ಷಣದಲ್ಲಿ ಕನ್ನಡ ಭಾಷೆಯ ಮಹತ್ವವನ್ನು ಕುರಿತು ವಿವರಿಸಿ?
8. ಪಡವ ಕಡಲ ಹೊನ್ನ ಹೆಣ್ಣಿನ ಕುರಿತು ಕವಿಯ ನಿಲುವೇನು?
9 ರಿಟೇಲ್ ಮಾರುಕಟ್ಟೆಯ ಯಶಸ್ಸಿನ ಮಾರ್ಗೋಪಾಯಗಳು ಯಾವುವು?
10. ಉದ್ಯೋಗ ಮತ್ತು ಕನ್ನಡದ ನಡುವೆ ಇರಬೇಕಾದ ಸಂಬಂಧ ಕುರಿತು ಬರೆಯಿರಿ?

11. ಜಾಗತೀಕರಣವೆಂಬುದು ಯೂರೋಪಿನ ಬಿಳಿಯ ಜನಾಂಕದ ಕುತಂತ್ರವೇ? ವಿವರಿಸಿ.

12. ಗಂಡ ಹೆಂಡಿರ ನಡಿವಿನ ಜಗಳ ಉಂಡು ಮಲಗುವತನಕ – ಈ ಹೇಳಿಕೆಯನ್ನು ವಿವರಿಸಿ

## PART-D

**ಇವುಗಳಲ್ಲಿ ಮೂರು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿ : 3x10=30**

13. ಈ ಶತಮಾನದಲ್ಲಿ ಕನ್ನಡ ಭಾಷೆಯು ಎದುರಿಸುತ್ತಿರುವ ಸವಾಲುಗಳು ಯಾವುದು? ವಿವರಿಸಿ.
14. ನಮ್ಮ ನಗರದ ಬದುಕು ಕವಿತೆಯ ಆಶಯವೇನು?
15. ಲಲಿತಾಳ ಕೊನೆಯ ನಿರ್ಧಾರವೇನು? ವಿವರಿಸಿ.
16. ಯಶಸ್ವಿ ವ್ಯಾಪಾರದ ಹತ್ತು ರೀಟೇಲ್ ಬ್ಯುಸಿನೆಸ್‌ಗಳಾವುವು? ವಿವರಿಸಿ
17. ವಾರನ್ ಬಫೆಟ್ ಜಗತ್ತಿನ ಶ್ರೇಷ್ಠ ಹೂಡಿಕೆದಾರ ಹೇಗೆ? ವಿವರಿಸಿ.

## PART-E

18. **ಕೆಳಗಿನ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ಬರೆಯಿರಿ. 1x5=5**

ಪ್ರಾದೇಶಿಕತೆ ಮತ್ತು ಜಾಗತಿಕತೆಗಳು ಎಲ್ಲ ನಾಗರಿಕತೆಗಳ ಒಳಗೂ ಅಂತರ್ಗತ ಮತ್ತು ಆನುಷಂಗಿಕ ಎಂದೇ ಅನ್ನಿಸುತ್ತದೆ. ಜಾಗತೀಕರಣ ಎನ್ನುವುದು ಯುರೋಪಿನ ಬಿಳಿಯ ಜನಾಂಗದ ಕುತಂತ್ರದ ಸೃಷ್ಟಿ ಎನ್ನುವ ವಾದವು ಭಾರತದಲ್ಲಿ ಸಂಭವಿಸುವ ಪ್ರತಿಯೊಂದು ದುರ್ಘಟನೆಗಳಿಗು ಮುಸ್ಲಿಮರು, ಐ.ಎಸ್.ಐ. ಮತ್ತು ಪಾಕಿಸ್ತಾನ ಕಾರಣ ಎಂದು ದೂರುವ ಹಿಂದೂ ಮೂಲಭೂತವಾದಿಗಳ ಧೋರಣೆಯನ್ನೇ ಹೋಲುತ್ತದೆ. ಜಾಗತೀಕರಣದ ಸಂದರ್ಭವನ್ನು ಸ್ವಾಭಾವಿಕವಾಗಿಯೇ ಮುಂದುವರಿದ ರಾಷ್ಟ್ರಗಳು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಯತ್ನಿಸುತ್ತಿವೆ. ಒಂದು ಕಾಲಕ್ಕೆ ಆಗೇಯ ಏಷ್ಯಾ ಫಿಲಿಪೀನ್, ಬಾಲಿ ದ್ವೀಪದವರೆಗೆ ವಿಸ್ತರಿಸಿದ್ದ ಭಾರತೀಯ ನಾಗರೀಕತೆ, ಇಡೀಯುರೋಪ್ ವರೆಗೆ ವಿಸ್ತರಿಸಿದ್ದ ಗ್ರೀಕ್ ಮತ್ತು ರೋಮನ್ ನಾಗರೀಕತೆ, ದಕ್ಷಿಣ ಅಮೆರಿಕದ ಪೆರು, ಚಿಲಿ, ಬೊಲಿವಿಯಾವರೆಗೆ ವಿಸ್ತರಿಸಿದ್ದ ಈಜಿಪ್ಟಿಯನ್ ನಾಗರೀಕತೆ ಇತ್ಯಾದಿ ಚಾರಿತ್ರಿಕ ವಾಸ್ತವಗಳನ್ನು ಗಮಸಿದಾಗ ಜಾಗತೀಕರಣ ಎಲ್ಲ ನಾಗರೀಕತೆಗಳಲ್ಲೂ ಇದ್ದದ್ದೆ ಎನ್ನುವುದನ್ನು ಅಲ್ಲಗಳೆಯುವುದು ಕಷ್ಟ.

## PART-F

**19. ವ್ಯಾಸಂಗ ದೃಢೀಕರಣ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅರ್ಜಿ ಬರೆಯಿರಿ**

**1x4=4**

## PART-G

**ನಾಲ್ಕು ಪದಗಳಿಗೆ ಅರ್ಥ ಬರೆಯಿರಿ. 4x1=4**

20. ಇನಿಯ
21. ದೀಕ್ಷೆ
22. ಯಶಸ್ಸು
23. ಜಾಗತೀಕರಣ
24. ಬೆರಗು

## PART-H

ಎರಡು ಪದಗಳಿಗೆ ಸ್ವಂತ ವಾಕ್ಯ ಬರೆಯಿರಿ. **2x1=2**

25. ಸಂಪತ್ತು
26. ಶಿಕ್ಷಣ
27. ಸವಾಲು
28. ವಾಸ್ತವ

## PART-I

ಇವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5x1=5**

29. ಬಿ.ಎಂ. ಶ್ರೀಕಂಠಯ್ಯ ಅವರ ಕೃತಿ

ಅ) ಬೇಂದ್ರೆ ಇ) ಅನಕೃ

ಆ) ಅಶ್ವತ್ಥಾಮನ್ ಈ) ಮಾಸ್ತಿ

30. ಅಕ್ಕಮಹಾದೇವಿಯ ವಚನಾಂಕಿತ

ಅ) ಚೆನ್ನಮಲ್ಲಿಕಾರ್ಜುನ ಇ) ಕೂಡಲಸಂಗಮದೇವ

ಆ) ಗುಹೇಶ್ವರ ಈ) ನಾಸ್ತಿನಾಥ

31. ನಮ್ಮ ನಗರ ಬದುಕು ಕವಿತೆಯನ್ನು ಬರೆದವರು.

ಅ) ಅಡಿಗ ಇ) ಕೆ.ಎಸ್. ನಿಸಾರ್ ಅಹಮ್ಮದ್

ಆ) ಕುವೆಂಪು ಈ) ಲಂಕೇಶ್

32. ಇವುಗಳಲ್ಲಿ ಲಿಪಿ ಇಲ್ಲದ ಭಾಷೆ ಯಾವುದು

ಅ) ತೆಲುಗು ಇ) ಮಳಯಾಳಂ

ಆ) ತುಳು ಈ) ಕನ್ನಡ

33. ವೆಂಕಟೇಶಮೂರ್ತಿಯ ಮಗಳ ಹೆಸರೇನು?

ಅ) ಗಿರಿಜಾ ಇ) ವನಜಾ

ಆ) ತನಿಜಾ ಈ) ಅನುಜಾ

****